# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 191 | Pages. 2 | Date: 09-07-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 191 – ಪುಟಗಳು : 2 | 09-07-2026 ಗುರುವಾರ | Ph: 8762954248 | ದರ : ₹1


# ಮಲೆನಾಡಿನಲ್ಲಿ ನಿಲ್ಲದ ಮಳೆ-ಬಿರುಗಾಳಿ ಅಬ್ಬರ

## ಸಕಲೇಶಪುರದಲ್ಲಿ ಅನಾಹುತಗಳ ಸರಮಾಲೆ I ಅರಣ್ಯ ಇಲಾಖೆ ಮಿಂಚಿನ ಕಾರ್ಯಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪುನರ್ವಸು ಮಳೆಯ ಅಬ್ಬರಕ್ಕೆ ಮಲೆನಾಡಿನ ಸಕಲೇಶಪುರ ತಾಲೂಕು ತತ್ತರಿಸಿದ್ದು, ಬುಧವಾರ ಮಳೆ ತುಸು ವಿರಾಮ ನೀಡಿದರೂ ಬಿರುಗಾಳಿ ಮತ್ತು ಕಳೆದ ಕೆಲ ದಿನಗಳ ಮಳೆಯ ಪರಿಣಾಮ ಅನಾಹುತಗಳು ಮುಂದುವರಿದಿವೆ.

ಮರಗಳು, ವಿದ್ಯುತ್ ಕಂಬಗಳು ಉರುಳುವುದು, ರಸ್ತೆ ಸಂಚಾರಕ್ಕೆ ಅಡಚಣೆ, ವಿದ್ಯುತ್ ವ್ಯತ್ಯಯ ಸೇರಿದಂತೆ ಹಲವು ಸಮಸ್ಯೆಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿವೆ. ಕಳೆದ ಒಂದು ವಾರದಿಂದ ತಾಲೂಕಿನಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು,

ಸೋಮವಾರ ಹಾಗೂ ಮಂಗಳವಾರ ಶಾಲೆ, ಕಾಲೇಜು ಮತ್ತು ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿತ್ತು. ಮಂಗಳವಾರ ರಾತ್ರಿ ಉತ್ತಮ ಮಳೆಯಾದರೂ, ಶೈಕ್ಷಣಿಕ ಚಟುವಟಿಕೆಗೆ ಮತ್ತಷ್ಟು ತೊಂದರೆಯಾಗದಂತೆ ಬುಧವಾರ ರಜೆ ಘೋಷಿಸಲಿಲ್ಲ. ಅದೃಷ್ಟವಶಾತ್ ಸಂಜೆವರೆಗೂ ಮಳೆ ಬಹುತೇಕ ಬಿಡುವು ನೀಡಿದ್ದರಿಂದ ಶಾಲೆಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

### ನಕಲಿ ರಜೆ ಆದೇಶ ವೈರಲ್

ಸೋಮವಾರ ಮತ್ತು ಮಂಗಳವಾರದ ತಹಸೀಲ್ದಾರ್ ಆದೇಶದ ಪ್ರತಿಯ ದಿನಾಂಕವನ್ನು ಮಾತ್ರ ಬದಲಿಸಿ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟ ಪರಿಣಾಮ ಬುಧವಾರವೂ ರಜೆ ಇದೆ ಎಂಬ ಗೊಂದಲ ಉಂಟಾಯಿತು. ಹಲವಾರು ವಾಟ್ಸ್ ಆ್ಯಪ್ ಗುಂಪುಗಳಲ್ಲಿ ನಕಲಿ ಆದೇಶ ಪತ್ರ ಹರಿದಾಡಿತು. ಬಳಿಕ ತಹಸೀಲ್ದಾರ್ ಸ್ಪಷ್ಟನೆ ನೀಡಿ, ಬುಧವಾರ ಯಾವುದೇ ರಜೆ ಘೋಷಿಸಿಲ್ಲ. ಸುಳ್ಳು



ಮಾಹಿತಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆ ಹೊರಡಿಸಿದರು. ಪತ್ರಕರ್ತರು ಹಾಗೂ ಅಧಿಕೃತ ಮೂಲಗಳ ಮೂಲಕ ಮಾಹಿತಿ ಹಂಚಿದ ಬಳಿಕ ಗೊಂದಲ ನಿವಾರಣೆಯಾಗಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿದರು.

### ಅರಣ್ಯ ಇಲಾಖೆ ಮಿಂಚಿನ ಕಾರ್ಯಾಚರಣೆ

ಬಿರುಗಾಳಿಯಿಂದ ತಾಲೂಕಿನ ವಿವಿಧೆಡೆ ಮರಗಳು ಉರುಳಿ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದ್ದು, ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ನೇತೃತ್ವದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ತ್ವರಿತ ಕಾರ್ಯಾಚರಣೆ ನಡೆಸಿದರು.

ಪಟ್ಟಣದ ಇಂದಿರಾ ಕ್ಯಾಂಟೀನ್ ಆವರಣದಲ್ಲಿ ಉರುಳಿದ್ದ ಬೃಹತ್ ಮರವನ್ನು ತೆರವುಗೊಳಿಸಲಾಯಿತು.

ಮಠಸಾಗರ-ಕೃಷ್ಣಾಪುರ ಸಂಪರ್ಕ ರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಬೃಹತ್ ಬೀಟೆ ಮರವನ್ನು ತೆರವುಗೊಳಿಸಿ ಹಾಸನ ಅರಣ್ಯ ಇಲಾಖೆಯ ಸಂಗ್ರಹಾಲಯಕ್ಕೆ ರವಾನಿಸಲಾಯಿತು. ಮಾರನಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ-75 ಬದಿಯಲ್ಲಿ ಬಿದ್ದಿದ್ದ ಮರಗಳನ್ನೂ ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಲಾಯಿತು.

ಪುನರ್ವಸು ಮಳೆಯ ಅಬ್ಬರದಿಂದ ಹಳ್ಳ-ಕೊಳ್ಳಗಳು, ನದಿ ಹಾಗೂ ತೊರೆಗಳು ತುಂಬಿ ಹರಿಯುತ್ತಿವೆ. ಹೆತ್ತೂರು, ಯಸಳೂರು, ಹಾನುಬಾಳು ಹಾಗೂ ಕಸಬಾ ಹೋಬಳಿಯ ಹಲವು ಗ್ರಾಮಗಳಲ್ಲಿ ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳಿದ ಪರಿಣಾಮ ವಿದ್ಯುತ್ ಸಂಪರ್ಕ ಸಂಪೂರ್ಣ ಕಡಿತಗೊಂಡಿದ್ದು, ಅನೇಕ ಗ್ರಾಮಗಳು ಅಕ್ಷರಶಃ ದ್ವೀಪದಂತಾಗಿವೆ.

ಹಾನುಬಾಳುದೇವಾಲದಕೆರೆ ಮುಖ್ಯರಸ್ತೆಯ ಗೇಟ್ ಲೈನ್ ಸಮೀಪ ಹಲವು ವಿದ್ಯುತ್ ಕಂಬಗಳು ರಸ್ತೆಯತ್ತ ಅಪಾಯಕಾರಿಯಾಗಿ ವಾಲಿದ್ದು, ಯಾವುದೇ ಕ್ಷಣದಲ್ಲಿ ನೆಲಕ್ಕುರುಳುವ ಭೀತಿ ಎದುರಾಗಿದೆ. ಇದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಆತಂಕದಲ್ಲಿ ಸಂಚರಿಸುವಂತಾಗಿದೆ.

ವಿದ್ಯುತ್ ಸಂಪರ್ಕವನ್ನು ಮರುಸ್ಥಾಪಿಸಲು ಸೆಸ್ಕ್ ಸಿಬ್ಬಂದಿ ಹಗಲು-ರಾತ್ರಿ ಎನ್ನದೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಳೆ ಮತ್ತು ಬಿರುಗಾಳಿಯ ನಡುವೆಯೂ ವಿದ್ಯುತ್ ವ್ಯವಸ್ಥೆ ಪುನಃಸ್ಥಾಪಿಸಲು ಹರಸಾಹಸ ಪಡುತ್ತಿದ್ದಾರೆ.

## ಮುನ್ನೆಚ್ಚರಿಕೆ ವಹಿಸಲು ಜಿಲ್ಲಾಡಳಿತ ಮನವಿ

ಹಾಸನ: ಜಿಲ್ಲೆಯ ಕೆಲವು ಭಾಗಗಳಲ್ಲಿ ಜು.10ರ ವರೆಗೆ ಭಾರೀ ಮಳೆಯಾಗುವ ಹಾಗೂ ಜು.11ರ ವರೆಗೆ ರಾಜ್ಯದ ಘಟ್ಟ ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವುದಾಗಿ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯ ಸಾರ್ವಜನಿಕರು, ವಿಶೇಷವಾಗಿ ಸಕಲೇಶಪುರ ತಾಲ್ಲೂಕು ಹಾಗೂ ಇತರೆ ಗುಡ್ಡಗಾಡು ಪ್ರದೇಶಗಳ ನಿವಾಸಿಗಳು ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ಅನಗತ್ಯವಾಗಿ ಘಟ್ಟ ಪ್ರದೇಶಗಳಿಗೆ ಹಾಗೂ ಭೂಕುಸಿತ ಸಂಭವಿಸುವ ಸಾಧ್ಯತೆಯಿರುವ ಸ್ಥಳಗಳಿಗೆ ಪ್ರಯಾಣ ಮಾಡುವುದನ್ನು ಸಾಧ್ಯವಾದಷ್ಟು ತಪ್ಪಿಸಬೇಕು, ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ-75 ರಲ್ಲಿ ಆನೆಮಹಲ್-ಮಾರನಹಳ್ಳಿ ರಸ್ತೆ ಮಾರ್ಗವಾಗಿ ಸಂಚರಿಸುವ ವಾಹನ ಸವಾರರು ಅತ್ಯಂತ ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕು ಹಾಗೂ ಪೊಲೀಸ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.



ರೈತರು ಮಳೆಯ ಸಮಯದಲ್ಲಿ ಹೊಲಗಳಲ್ಲಿ ಕೆಲಸ ಮಾಡುವುದನ್ನು ತಪ್ಪಿಸಬೇಕು ಹಾಗೂ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಲ್ಲಿ ಇರಿಸಬೇಕು, ಯಾವುದೇ ತುರ್ತು ಪರಿಸ್ಥಿತಿ ಎದುರಾದಲ್ಲಿ ತಕ್ಷಣ ಜಿಲ್ಲಾಡಳಿತ,/ತಾಲೂಕು ಆಡಳಿತ/ಪೊಲೀಸ್ ಇಲಾಖೆ ಅಥವಾ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ 08172-261111 ಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

# ಜು. 10 ರಿಂದ 14ರ ವರೆಗೆ ಪೌರಾಣಿಕ ನಾಟಕೋತ್ಸವ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲೆಯ ವಿವಿಧ ಸಾಂಸ್ಕೃತಿಕ ಮತ್ತು ಕಲಾ ಸಂಘಗಳ ಸಹಯೋಗದಲ್ಲಿ ಜು. 10 ರಿಂದ 14ರ ವರೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಐದು ದಿನಗಳ ಪೌರಾಣಿಕ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಶ್ರೀ ಲಕ್ಷ್ಮೀರಂಗನಾಥ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷ ಎಸ್.ಎಲ್. ಚಂದ್ರಶೇಖರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಪ್ರತಿದಿನ ಬೆಳಗ್ಗೆ 10.30ಕ್ಕೆ ನಾಟಕೋತ್ಸವ ಆರಂಭವಾಗಲಿದೆ. ಉಚಿತ ಪ್ರವೇಶ ಕಲ್ಪಿಸಲಾಗಿದೆ. ಆಧುನಿಕ ಮನರಂಜನಾ ಮಾಧ್ಯಮಗಳ ಪ್ರಭಾವ ಹೆಚ್ಚುತ್ತಿರುವ ಸಂದರ್ಭದಲ್ಲಿ ಪೌರಾಣಿಕ ನಾಟಕಗಳ ಮೂಲಕ ಯುವ ಸಮುದಾಯಕ್ಕೆ ಭಾರತೀಯ ಸಂಸ್ಕೃತಿ, ಧಾರ್ಮಿಕ ಮೌಲ್ಯಗಳು ಹಾಗೂ ರಂಗಕಲೆಯ ವೈಭವವನ್ನು ಪರಿಚಯಿಸುವ ಉದ್ದೇಶದಿಂದ ನಾಟಕೋತ್ಸವ ಏರ್ಪಡಿಸಲಾಗಿದೆ ಎಂದರು.

ಜು.10 ರಂದು ಶ್ರೀ ಚಾಮುಂಡೇಶ್ವರಿ ಕ್ಷೇಮಾಭಿವೃದ್ಧಿ ಕಲಾ ಸಂಘದಿಂದ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ, ಜು.11 ರಂದು ಶ್ರೀ ಅನ್ನಪೂರ್ಣೇಶ್ವರಿ ಕಲಾ ಸಂಘದಿಂದ ಕುರುಕ್ಷೇತ್ರ, ಜು. 12 ರಂದು ಶ್ರೀ ಮಾರುತಿ ರಂಗಭೂಮಿ ಮತ್ತು ಸಾಂಸ್ಕೃತಿಕ ಕಲಾ ಸಂಘದಿಂದ ಸಂಪೂರ್ಣ ರಾಮಾಯಣ, ಜು. 13 ರಂದು ಶ್ರೀದೇವಿ ಆದಿಶಕ್ತಿ ಕಲಾವಿದರ ಟ್ರಸ್ಟ್ ಗೌರಿಕೊಪ್ಪಲು ವತಿಯಿಂದ ಮುದ್ರಿಕಾ ಪ್ರಧಾನ ಅಥವಾ ಸಂಪೂರ್ಣ ರಾಮಾಯಣ ಹಾಗೂ ನಾಟಕೋತ್ಸವದ ಸಮಾರೋಪ ದಿನವಾದ 14 ರಂದು ಸಿಂಗಮ್ಮದೇವಿ ಮತ್ತು ಹೊಳೆನರಸೀಪುರದ ಶ್ರೀ ಶನೇಶ್ವರಸ್ವಾಮಿ ಕಲಾ ಸಂಘದಿಂದ ರಾಜಸತ್ಯವ್ರತ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಹೇಳಿದರು.

ಹಿರಿಯ ವಕೀಲ ಮಳಲಿ ಜಯರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಲಾವಿದರಾದ ಗೋವಿಂದೇಗೌಡ, ವೈಭವ್ ವೆಂಕಟೇಶ್, ಅಣ್ಣಪ್ಪ, ಮಹಾದೇವ್, ಸ್ವಾಮಿ, ನಿರಂಜನ್, ಗುರುಪ್ರಸಾದ್, ಚಂದ್ರಶೇಖರ್ ಇದ್ದರು.

# ಚನ್ನಕೇಶವ ಸ್ವಾಮಿ ಹುಂಡಿಗೆ ಕನ್ನ ಹಾಕಿದ ವಿಡಿಯೋಗ್ರಾಫರ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿಶ್ವವಿಖ್ಯಾತ ಚನ್ನಕೇಶ್ವರ ಸ್ವಾಮಿ ದೇವಾಲಯದಲ್ಲಿ ಬುಧವಾರ ನಡೆದ ಹುಂಡಿ ಹಣ ಎಣಿಕೆ ವೇಳೆ ಸುಮಾರು 1.98 ಲಕ್ಷ ರೂ.ಗಳನ್ನು ತನ್ನ ಬಳಿ ಇರಿಸಿಕೊಂಡಿದ್ದ ಆರೋಪದ ಮೇಲೆ ವಿಡಿಯೋಗ್ರಾಫರ್ ನೀಲಕಂಠನನ್ನು ಪ್ರವಾಸಿ ಮಿತ್ರ ಪೊಲೀಸರು ವಶಕ್ಕೆ ಪಡೆದಿದ್ದಾರೆ.


ಪ್ರತಿ ಬಾರಿಯಂತೆ ಈ ಬಾರಿಯೂ ಹುಂಡಿಯಲ್ಲಿದ್ದ ಕಾಣಿಕೆ ಹಣವನ್ನು ಎಣಿಸಲು ನಗರದ ಸರ್ವೋದಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳನ್ನು ದೇವಾಲಯದ ಕಲ್ಯಾಣ ಮಂಟಪಕ್ಕೆ ಕರೆಸಿಕೊಳ್ಳಲಾಗಿತ್ತು. ಹಣ ಎಣಿಕೆ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣಕ್ಕಾಗಿ ಎಂಪಿ ಸೇವಾ ಕೇಂದ್ರದ ಸಿಬ್ಬಂದಿ ನೀಲಕಂಠ ಅವರನ್ನು ನಿಯೋಜಿಸಲಾಗಿತ್ತು. ಇದೇ ವೇಳೆ ಆತ 500 ರೂ. ಮುಖಬೆಲೆಯ ನೋಟುಗಳ ಕಟ್ಟನ್ನು ತನ್ನ ಜರ್ಕಿನ್‌ನಲ್ಲಿ ಇರಿಸಿಕೊಂಡಿರುವ ಬಗ್ಗೆ ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಕರ್ತವ್ಯದಲ್ಲಿದ್ದ ಪ್ರವಾಸಿ ಮಿತ್ರ ಪೊಲೀಸರು ಪರಿಶೀಲಿಸಿದ್ದಾರೆ. ಬಳಿಕ ಸುಮಾರು 1.98 ಲಕ್ಷ ರೂ. ಪತ್ತೆಯಾದ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ಪಡೆದು ಕ್ರಮ ಕೈಗೊಳ್ಳಲಾಗಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪತ್ತೆಯಾದ ಹಣವನ್ನು ದೇವಾಲಯದ ಲೆಕ್ಕಕ್ಕೆ ಸೇರಿಸಲಾಗಿದ್ದು, ಘಟನೆಯ ಕುರಿತು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿ ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಯೋಗೇಶ್ ಅವರು, ಪ್ರಕರಣ ಸಂಬಂಧ ಬೇಲೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗುತ್ತಿದ್ದು, ತನಿಖೆಯ ನಂತರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಇದೇ ವೇಳೆ ಬೇಲೂರು ತಾಲ್ಲೂಕಿನಲ್ಲಿ ಭಾರೀ ಮಳೆಯ ಹಿನ್ನೆಲೆಯಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದ ದಿನವೇ ವಿದ್ಯಾರ್ಥಿಗಳನ್ನು ಹುಂಡಿ ಹಣ ಎಣಿಕೆ ಕಾರ್ಯಕ್ಕೆ ಕರೆಸಿಕೊಳ್ಳಲಾಗಿತ್ತು ಎಂಬ ವಿಚಾರವೂ ಸಾರ್ವಜನಿಕ ಚರ್ಚೆಗೆ ಕಾರಣವಾಗಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂದು ಹಲವರು ಆಗ್ರಹಿಸಿದ್ದಾರೆ.

# ಸುಪ್ರಿಯ ಬಾರ್‌ನಲ್ಲಿ ಬೆಂಕಿ: ತಪ್ಪಿದ ಅನಾಹುತ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕಸ್ತೂರಬಾ ರಸ್ತೆಯ ನಗರ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಸುಪ್ರಿಯಾ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಬುಧವಾರ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡು ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಸುದ್ದಿ ತಿಳಿದ ಕೂಡಲೇ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಸಮಯೋಚಿತವಾಗಿ ಸ್ಥಳಕ್ಕೆ ಧಾವಿಸಿ ಸತತ ಒಂದು ಗಂಟೆಗೂ ಅಧಿಕ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ಮತ್ತು ಹೊಗೆಯನ್ನು ಸಂಪೂರ್ಣ ನಿಯಂತ್ರಣಕ್ಕೆ ತಂದರು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಘಟನೆ ಕುರಿತು ಮಾತನಾಡಿದ ಅಗ್ನಿಶಾಮಕ ದಳದ ನಿಂಗರಾಜು, ಬೆಳಿಗ್ಗೆ ಸುಪ್ರಿಯಾ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಇಲಾಖೆಗೆ ಮಾಹಿತಿ ಬಂದ ತಕ್ಷಣ ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಆಗಮಿಸಿದಾಗ ಅಂಡರ್‌ಗ್ರೌಂಡ್‌ನಲ್ಲಿ ಅಳವಡಿಸಲಾಗಿದ್ದ ವಿದ್ಯುತ್ ಕೇಬಲ್‌ಗಳಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಜಂಕ್ಷನ್ ಬಾಕ್ಸ್ ಹಾಗೂ ಮೀಟರ್ ಬೋರ್ಡ್ ಭಾಗದಲ್ಲಿ ಬೆಂಕಿ ಹೊತ್ತಿಕೊಂಡಿರುವುದು ಕಂಡುಬಂದಿತು. ಬೆಂಕಿಗಿಂತಲೂ ದಟ್ಟ ಹೊಗೆಯೇ ಜಾಸ್ತಿಯಾಗಿತ್ತು. ಕಡೆಗೆ ಸಿಬ್ಬಂದಿ ಕೃತಕ ಉಸಿರಾಟದ ಸಾಧನ ಧರಿಸಿ ಜೀವದ ಹಂಗು ತೊರೆದು ಒಳಗೆ ಪ್ರವೇಶಿಸಿ ವಿದ್ಯುತ್ ಸಂಪರ್ಕ ಸಂಪೂರ್ಣ ಸ್ಥಗಿತಗೊಳಿಸಿದ ಬಳಿಕ ಕಾರ್ಯಾಚರನೆ ನಡೆಸಲಾಯಿತು ಎಂದರು.

# ಬಾಬು ಜಗಜೀವನ ರಾಂಗೆ ಅವಮಾನ: ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಕಾಟಾಚಾರಕ್ಕೆ ಮಾಡುವ ಮೂಲಕ ಸಮಾಜ ಕಲ್ಯಾಣ ಇಲಾಖೆ ಮೇರು ನಾಯಕನಿಗೆ ಅಪಮಾನ ಮಾಡಿದೆ ಎಂದು ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್.ವಿಜಯ್‌ಕುಮಾರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಜು. 6ರಂದು ಅಂಬೇಡ್ಕರ್ ಭವನದಲ್ಲಿ ಪುಣ್ಯ ಸ್ಮರಣೆ ಆಯೋಜಿಸಲಾಗಿತ್ತಾದರೂ ವಾಟ್ಸಾಪ್‌ನಲ್ಲಿ ಕಾರ್ಯಕ್ರಮದ ಸಂದೇಶ ಕಳುಹಿಸಿ ಸುಮ್ಮನಾಗಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಇದೇ ಮೊದಲ ಬಾರಿಗೆ ನಡೆದ ಕಾರ್ಯಕ್ರಮ ಇದಾಗಿದೆ. ಈ ಹಿಂದಿನ ಜಿಲ್ಲಾಧಿಕಾರಿ ಸತ್ಯಭಾಮಾ ಅವರು ಅರ್ಥಪೂರ್ಣ ಸಮಾರಂಭ ಮಾಡಿದ್ದರು. ಮಾದಿಗ ಸಮುದಾಯವನ್ನು ನಿರ್ಲಕ್ಷಿಸಬೇಕೆಂಬ ಕಾರಣದಿಂದಲೇ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ದೂದ್ ಪೀರ್ ಹೀಗೆ ಮಾಡಿದ್ದಾರೆ ಎಂದು ಆರೋಪಿಸಿದರು.

# ಗ್ರಾಮೀಣ ಭಾಗದಲ್ಲಿ ವಿದ್ಯುತ್ ಕಲ್ಪಿಸಲು ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಭಾರೀ ಮಳೆ ಹಾಗು ಬಿರುಗಾಳಿಯಿಂದ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಆದಷ್ಟು ಬೇಗ ಸಮಸ್ಯೆ ಬಗೆಹರಿಸಿ ಬೆಳಕಿನ ವ್ಯವಸ್ಥೆ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಸೆಸ್ಕ್ ಕಚೇರಿಯಲ್ಲಿ ಬುಧವಾರ ನಡೆದ ತುರ್ತು ಸಭೆಯಲ್ಲಿ ಮಾತನಾಡಿದ ಅವರು, ಹಾನುಬಾಳು, ಹೆತ್ತೂರು, ಯಸಳೂರು, ಬೆಳಗೋಡು ಹಾಗೂ ಕಸಬಾ ಸೇರಿ ಸಕಲೇಶಪುರದ ವಿವಿಧ ಹೋಬಳಿ ಹಾಗು ಆಲೂರಿನ ಕಾರಗೋಡು , ಮಗ್ಗೆ, ಕುಂದೂರು ,ಕೆ.ಹೊಸಕೋಟೆ ಭಾಗಗಳಲ್ಲಿ ವಿದ್ಯುತ್ ಕಂಬಗಳು ಉರುಳಿ ಬಿದ್ದಿರುವುದರಿಂದ ಜನರು ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಸಮಗ್ರ ಮಾಹಿತಿ ಪಡೆದರು.

ಸಕಲೇಶಪುರ ವ್ಯಾಪ್ತಿಯಲ್ಲಿ 219, ಆಲೂರು



ತಾಲ್ಲೂಕಿನಲ್ಲಿ 80 ಕಂಬಗಳು ಹಾನಿಗೊಳಗಾಗಿವೆ. ಗುರುವಾರ ಸಂಜೆಯೊಳಗೆ ಎಲ್ಲೆಡೆ ವಿದ್ಯುತ್ ಸಂಪರ್ಕ ಪುನಃಸ್ಥಾಪಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಶಾಸಕ ಮಂಜು ತಿಳಿಸಿದರು.

ಸಭೆಯಲ್ಲಿ ಸಿಬ್ಬಂದಿ ಕೊರತೆಯ ವಿಚಾರವೂ ಪ್ರಸ್ತಾಪವಾಗಿದ್ದು, ಸಕಲೇಶಪುರ ವಿಭಾಗದಲ್ಲಿ ಸುಮಾರು 80 ಸಿಬ್ಬಂದಿ ಕೊರತೆ ಇರುವ ಮಾಹಿತಿ ಲಭ್ಯವಾಗಿದೆ. ತಾತ್ಕಾಲಿಕವಾಗಿ 40 ಸಿಬ್ಬಂದಿಯನ್ನು ಸಕಲೇಶಪುರಕ್ಕೆ ಹಾಗೂ 8 ಹೆಚ್ಚುವರಿ ಸಿಬ್ಬಂದಿಯನ್ನು ಆಲೂರು ತಾಲ್ಲೂಕಿನ ಮಗ್ಗೆ ಭಾಗಕ್ಕೆ ನಿಯೋಜಿಸಲು ಅಧಿಕಾರಿಗಳು ಒಪ್ಪಿಗೆ ನೀಡಿದ್ದಾರೆ. ಅಗತ್ಯವಿದ್ದರೆ ಹೊರ ತಾಲ್ಲೂಕುಗಳಿಂದಲೂ ಸಿಬ್ಬಂದಿಯನ್ನು ಕರೆಸಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ. ಮಳೆಗಾಲಕ್ಕೂ ಮುನ್ನವೇ ಜಂಗಲ್ ಕ್ಲಿಯರೆನ್ಸ್ ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು. ಆದರೂ ಈ ಬಾರಿ ಬಿರುಗಾಳಿ ತೀವ್ರವಾಗಿದ್ದರಿಂದ ಮರಗಳು ವಿದ್ಯುತ್ ತಂತಿ ಹಾಗು ಕಂಬಗಳ ಮೇಲೆ ಬಿದ್ದು ಹೆಚ್ಚಿನ ಹಾನಿಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು. ಸಾರ್ವಜನಿಕರಿಂದ ನಿರಂತರ ದೂರುಗಳು ಬರುತ್ತಿರುವ ಹಿನೆಲೆಯಲ್ಲಿ, ರೋಗಿಗಳು, ವಿದ್ಯಾರ್ಥಿಗಳು ಹಾಗೂ ಗರ್ಭಿಣಿಯರಿಗೆ ತೊಂದರೆಯಾಗದಂತೆ ತ್ವರಿತವಾಗಿ ವಿದ್ಯುತ್ ಪೂರೈಕೆ ಪುನಃಸ್ಥಾಪಿಸಬೇಕು ಎಂದು ಶಾಸಕ ಮಂಜು ಸೂಚಿಸಿದರು.

ಕೆಲವು ಜೆಇ ಹಾಗೂ ಲೈನ್‌ಮನ್‌ಗಳು ಸಾರ್ವಜನಿಕರ ದೂರವಾಣಿ ಕರೆಗಳಿಗೆ ಸ್ಪಂದಿಸುತ್ತಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಎಲ್ಲಾ ಅಧಿಕಾರಿಗಳು ಸಾರ್ವಜನಿಕರ ಕರೆಗಳಿಗೆ ಕಡ್ಡಾಯವಾಗಿ ಸ್ಪಂದಿಸಬೇಕು. ಕರೆ ಸ್ವೀಕರಿಸಲು ಸಾಧ್ಯವಾಗದಿದ್ದರೆ ಬಳಿಕ ಕರೆ ಮಾಡಿ ಮಾಹಿತಿ ನೀಡಬೇಕು. ಪ್ರತಿದಿನ ಎಇ ಹಾಗೂ ಜೆಇಗಳು ಸಮನ್ವಯ ಸಭೆ ನಡೆಸಿ ಸಮಸ್ಯೆಗಳ ಕುರಿತು ಚರ್ಚಿಸಿ ತಕ್ಷಣ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

ಗ್ರಾಮೀಣ ಭಾಗದ ಜನರು ಜಂಗಲ್ ಕ್ಲಿಯರೆನ್ಸ್ ಹಾಗು ಕಂಬ ಅಳವಡಿಕೆ ಕಾರ್ಯದಲ್ಲಿ ಸ್ವಯಂ ಪ್ರೇರಿತರಾಗಿ ಸಹಕರಿಸುತ್ತಿರುವುದನ್ನು ಶ್ಲಾಘಿಸಿದ ಅವರು, ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿ ಅವರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆಯೊಂದಿಗೆ ಸೇವೆ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸೆಸ್ಕಾಂ ಅಧೀಕ್ಷಕ ಸುನಿಲ್, ಕಾರ್ಯನಿರ್ವಾಹಕ ಅಭಿಯಂತರ ವೆಂಕಟೇಶ್, ಹಾಸನ ವಿಭಾಗ ಅರ್ಜುನ್ ಹಾಗು ಕೆಪಿಟಿಸಿಎಲ್ ಹಾಸನ ವಿಭಾಗದ ಪ್ರಸನ್ನ ಕೆರೋಡಿ, ಕೆಪಿಟಿಸಿಎಲ್ ಎಇ, ಜೆಇ, ಅರಣ್ಯ ಇಲಾಖೆ ಕುಡಿಯುವ ನೀರು ಹಾಗು ನೈರ್ಮಲ್ಯ ಇಲಾಖೆ ಸೇರಿ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

# ಅವೈಜ್ಞಾನಿಕ ಕಾಮಗಾರಿ: ಪುರಸಭೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದಲ್ಲಿ ನಡೆಯುತ್ತಿರುವ 6 ಕೋ.ರೂ. ವೆಚ್ಚದ ರಸ್ತೆ, ಪುಟ್‌ಪಾತ್ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟ ಮತ್ತು ಅವೈಜ್ಞಾನಿಕ ವಿಧಾನ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿ ರೈತ ಸಂಘದ ಸದಸ್ಯರು ಪುರಸಭೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್ ಹಾಗೂ ಎಂಜಿನಿಯರ್ ಶೇಖರ್ ಅವರನ್ನು ಅಡ್ಡಗಟ್ಟಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ ರಸ್ತೆಯನ್ನು 6 ಕೋ.ರೂ. ವೆಚ್ಚದಲ್ಲಿ 1 ಕಿ.ಮೀ. ರಸ್ತೆ, ಪುಟ್‌ಪಾತ್ ಹಾಗೂ ಚರಂಡಿ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಈಗಾಗಲೇ ರಸ್ತೆ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿದೆ.



ಆದರೆ ರಸ್ತೆ ಕಾಮಗಾರಿಯೂ ಕಳಪೆಯಿಂದ ಕೂಡಿರುವ ಪರಿಣಾಮ ಕೆಲವು ಕಡೆ ಡಾಂಬರ್ ಕಿತ್ತು ಬರುತ್ತಿದೆ. ರಸ್ತೆಗೆ ವೈಜ್ಞಾನಿಕವಾಗಿ ಡಾಂಬರ್ ಹಾಕದಿರುವ ಹಿನ್ನೆಲೆ ಮಳೆ ನೀರು ಮುಂದೆ ಹೋಗಲು ಸಾಧ್ಯವಾಗದೇ ಹಳ್ಳದಿಂದ ಕೂಡಿರುವ ರಸ್ತೆಯ ಮೇಲೆ ಎರಡು ಅಡಿ ನಿಂತು ಸಂಚಾರಕ್ಕೆ ತೊಂದರೆಯಾಗುತ್ತಿದೆ.

ಅಲ್ಲದೆ ಇದೀಗ ರಸ್ತೆಯ ಎರಡೂ ಬದಿಗಳಲ್ಲಿ ನಿರ್ಮಿಸಲಾಗುತ್ತಿರುವ ಪುಟ್‌ಪಾತ್ ಕಾಮಗಾರಿಯೂ ನಿಯಮಾನುಸಾರ ನಡೆಯುತ್ತಿಲ್ಲ ಎಂದು ಆರೋಪಿಸಿದರು.

ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ರೈತ ಸಂಘದ ಸದಸ್ಯರು ಹಾಗೂ ಸಾರ್ವಜನಿಕರು, ಮಳೆಯ ನಡುವೆಯೇ ತರಾತುರಿಯಲ್ಲಿ ರಸ್ತೆ ಬದಿಗೆ ಗಾರೆ ಹಾಕುವ ಮೂಲಕ ಪುಟ್ ಪಾತ್ ನಿರ್ಮಿಸಲಾಗುತ್ತಿದೆ. ವೈಜ್ಞಾನಿಕ ಮಾನದಂಡ ಪಾಲಿಸದೆ ಕಾಮಗಾರಿ ನಡೆಸಲಾಗುತ್ತಿದ್ದು, ಸಾರ್ವಜನಿಕರ ತೆರಿಗೆ ಹಣ ದುರುಪಯೋಗವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ಗಡಿಯನ್ನು ಪಟ್ಟಣ ಪಂಚಾಯಿತಿ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಜಂಟಿಯಾಗಿ ಗುರುತಿಸಿದ ಬಳಿಕವೇ ರಸ್ತೆಗಿಂತ ಸ್ವಲ್ಪ ಎತ್ತರದಲ್ಲಿ ಪುಟ್‌ಪಾತ್ ನಿರ್ಮಿಸಬೇಕು. ಇಲ್ಲವಾದರೆ ಕಳಪೆ ಹಾಗೂ ಅವೈಜ್ಞಾನಿಕವಾಗಿ ನಿರ್ಮಿಸಿರುವ ಕಾಮಗಾರಿಯನ್ನು ಜೆಸಿಬಿ ಮೂಲಕ ತೆರವುಗೊಳಿಸಲು ಮುಂದಾಗಬೇಕಾಗುತ್ತದೆಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ರೈತ ಸಂಘದ ಅಧ್ಯಕ್ಷ ಭುವನೇಶ್, ಹಲಗಯ್ಯ, ಪುರುಷೋತ್ತಮಗೌಡ, ಗೋವಿಂದಣ್ಣ, ಅಶೋಕ್, ಹೊಂಬೇಗೌಡ, ರಮೇಶ್, ಹನುಮಂತ, ರವಿ ಮತ್ತಿತರರಿದ್ದರು.

# ಪಠ್ಯೇತರ ಚಟುವಟಿಕೆ ವಿವಿಧ ಕ್ಲಬ್ ಉದ್ಘಾಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸಂತ ಫಿಲೋಮಿನಾ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಪಠ್ಯೇತರ ಚಟುವಟಿಕೆಯ ವಿವಿಧ ಘಟಕಗಳ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಸೇವಾದಳ ಸ್ಕೌಟ್ಸ್ ಅಂಡ್ ಗೈಡ್ಸ್, ಕಲ್ಚರಲ್ ಕ್ಲಬ್, ಸೈನ್ಸ್ ಕ್ಲಬ್, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್ ಎಸ್) ಇಕೋ ಕ್ಲಬ್ ಸೇರಿ ಸುಮಾರು 10 ಕ್ಲಬ್‌ಗಳು ಈ ವರ್ಷದ ಕಾರ್ಯ ಚಟುವಟಿಕೆ ಆರಂಭಿಸಿದವು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ವೀಣಾ ಲಿಡಿಯಾ ಲೋಬೋ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಇಂತಹ ಕ್ಲಬ್‌ಗಳು ಬಹು ಮುಖ್ಯ. ಓದಿನ ಜೊತೆಗೆ ನಾಯಕತ್ವದ ಗುಣಗಳು ಬೆಳೆಯಲು ಮತ್ತು ವ್ಯಕ್ತಿತ್ವ ವಿಕಸನಕ್ಕೆ ಇಂತಹ ಘಟಕಗಳು ಪೂರಕವಾಗುತ್ತವೆ. ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಪೂರಕವಾಗುತ್ತವೆಂದು ತಿಳಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿ ಡಾ. ಐಚನಹಳ್ಳಿ ಕೃಷ್ಣಪ್ಪ ಮತ್ತು ವಿವಿಧ ಘಟಕಗಳ ಮುಖ್ಯಸ್ಥರು ಹಾಗೂ ಉಪನ್ಯಾಸಕರು ಹಾಜರಿದ್ದರು.

## ಮಹಿಳೆ ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿವಾಹಿತ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಆಕೆ ಪ್ರತಿರೋಧ ತೋರಿದಾಗ ಕುಡುಗೋಲಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದ ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ನೀಡಿದೆ.

ತಾಲ್ಲೂಕಿನ ದೊಡ್ಡಪುರ ಗ್ರಾಮದ ಲತೇಶ್ ಅಪರಾಧಿ. 2022ರ ಮಾ. 16ರಂದು ಅದೇ ಗ್ರಾಮದ ರೇವತಿ ಎಂಬುವವರನ್ನು ಕೊಲೆಗೈದಿದ್ದ. ಮೃತ ಮಹಿಳೆಗೆ ಪತಿ, ಮಕ್ಕಳಿದ್ದರೂ ಲತೇಶ್, ಮೊದಲ ಪತಿಗೆ ವಿಚ್ಛೇದನ ಕೊಟ್ಟು ತನ್ನೊಂದಿಗೆ ಸಂಸಾರ ಮಾಡುವಂತೆ ಪೀಡಿಸುತ್ತಿದ್ದ. ಈ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಸಹ ನಡೆದಿದ್ದವು.

ಆ ದಿನ ಸಂಜೆ ರೇವತಿ ಮನೆ ಬಳಿ ಬಂದಿದ್ದ ಲತೇಶ್‌ನು ಅತ್ಯಾಚಾರಕ್ಕೆ ಮುಂದಾಗಿದ್ದಾಗ ಮಹಿಳೆ ತೀವ್ರ ವಿರೋಧ ಮಾಡಿದ್ದರಿಂದ ಕುಡುಗೋಲಿನಿಂದ ತಲೆ, ಎಡಗಣ್ಣು, ಮೊಣಕೈಗೆ ಹೊಡೆದಿದ್ದ ಪರಿಣಾಮ ರೇವತಿ ಸ್ಥಳದಲ್ಲೇ ಮೃತಪಟ್ಟಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಗ್ರಾಮಾಂತರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ 5ನೇ ಅಪರ ಮತ್ತು ಸತ್ರ ನ್ಯಾಯಾಧೀಶ ಹೆಚ್.ಆರ್.ರವಿಕುಮಾರ್ ಅವರು ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ 20 ಸಾವಿರ ರೂ. ದಂಡ ವಿಧಿಸಿ ಜು. 4ರಂದು ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಈ.ಡಿ.ಶ್ರೀನಿವಾಸ ವಾದ ಮಂಡಿಸಿದ್ದರು.

# ಕೆಂಪೇಗೌಡರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗೋಣ

ಆಲೂರು: ನಾಡಪ್ರಭು ಕೆಂಪೇಗೌಡರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸೋಣ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ತಾಲ್ಲೂಕು ಒಕ್ಕಲಿಗರ ಸಂಘ, ಒಕ್ಕಲಿಗ ಯುವ ಬ್ರಿಗೇಡ್ ಹಾಗು ವಿವಿಧ ಸಂಘ ಸಂಸ್ಥೆಗಳಿಂದ ಬುಧವಾರ ಏರ್ಪಡಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯುತ್ಸವದಲ್ಲಿ ಆಶೀರ್ವಚನ ನೀಡಿದರು.

ಕೆಂಪೇಗೌಡರು ಎಲ್ಲಾ ಸಮುದಾಯಗಳಿಗೆ ಸಮಾನ ಗೌರವ ನೀಡಿದ ದೂರದೃಷ್ಟಿಯ ನಾಯಕ. ರೈತರಾಗಿದ್ದ ಅವರು ಬೆಂಗಳೂರಿನಂತಹ ಮಹಾನಗರ ನಿರ್ಮಾಣದ ರಾಜ್ಯದ ಅಭಿವೃದ್ಧಿಗೆ ತಮ್ಮದೇಯಾದ ಕೊಡುಗೆ ನೀಡಿದರು.



500 ವರ್ಷಗಳ ಹಿಂದೆಯೇ ಭವಿಷ್ಯದ ದೃಷ್ಟಿಯಿಂದ ನಗರದಲ್ಲಿ 1500 ಕೆರೆ ಕಟ್ಟೆಗಳನ್ನ ನಿರ್ಮಿಸಿ ನೀರಿನ ದಾಹ ಇಂಗಿಸಿದ ಖ್ಯಾತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಕೆಂಪೇಗೌಡರಂತಹ ಮಹಾನ್ ನಾಯಕರ ಕೊಡುಗೆಯಿಂದ ಕರ್ನಾಟಕವನ್ನು ವಿಶ್ವವೇ ಬೆರಗುಗಣ್ಣಿನಿಂದ ನೋಡುತ್ತಿದೆ ಎಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಬೆಂಗಳೂರು ನಗರವನ್ನು ನಿರ್ಮಿಸಿ ಕರ್ನಾಟಕವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಕೆಂಪೇಗೌಡರ ಗೌರವಾರ್ಥವಾಗಿ ದೇವನಹಳ್ಳಿ ಬಳಿ ಇರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರಿಡಲಾಗಿದೆ ಎಂದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಇತಿಹಾಸವನ್ನು ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂದು ಹೇಳಿದ್ದಾರೆ. ಅದಕ್ಕೆ ಕೆಂಪೇಗೌಡರು ಸಾಕ್ಷಿಯಾಗುತ್ತಾರೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಉಪನ್ಯಾಸ ನೀಡಿದರು.

ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಆಕರ್ಷಕ ಮೆರವಣಿಗೆ ಏರ್ಪಡಿಸಲಾಗಿತ್ತು. ಡಿಜೆ ಸಂಗೀತ ಮತ್ತು ವೀರಗಾಸೆ ಕುಣಿತಕ್ಕೆ ಸಮುದಾಯದ ಬಂಧುಗಳು ಕುಣಿದು ಕುಪ್ಪಳಿಸಿದರು. ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್, ಸಕಲೇಶಪುರ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್, ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಹೆಚ್.ಪಿ.ಮೋಹನ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ರಘುಗೌಡ, ಬಾಗೂರು ಮಂಜೇಗೌಡ, ಉಪ ತಹಶೀಲ್ದಾರ್ ರಮೇಶ್, ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಹೆಚ್.ಪಿ. ಮೋಹನ್, ಉಪಾಧ್ಯಕ್ಷ ಕೆ.ಎಸ್.ಮಂಜೇಗೌಡ, ಖಜಾಂಚಿ ಶಾಂತಕೃಷ್ಣ ಇತರರು ಇತರರಿದ್ದರು.

## 25 ಗ್ರಾಂ ತೂಕದ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 25 ಗ್ರಾಂ ತೂಕದ ಚಿನ್ನಾಭರಣ ಹಾಗೂ 50 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ಅಶೋಕ ನಗರದಲ್ಲಿ ನಡೆದಿದೆ.

ನಿವಾಸಿ ಮಹದೇವಸ್ವಾಮಿ ಅವರು ಜು. 4ರಂದು ಮದುವೆ ನಿಮಿತ್ತ ಮನೆಗೆ ಬಾಗಿಲು ಹಾಕಿಕೊಂಡು ಕುಟುಂಬ ಸಮೇತ ತೆರಳಿದ್ದರು. ಮಾರನೇ ದಿನ ಮನೆಗೆ ಬಂದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬಲವಾದ ಆಯುಧದಿಂದ ಬೀಗ ಮುರಿದು ಒಳ ಪ್ರವೇಶಿಸಿರುವ ಕಳ್ಳರು ಬೀರುವಿನ ಲಾಕರ್ ಮುರಿದು 50 ಸಾವಿರ ರೂ. ನಗದು, 25 ಗ್ರಾಂ ತೂಕದ ಚಿನ್ನದ ಚೈನ್, ಚಿನ್ನದ ಓಲೆ, ಬೆಳ್ಳಿ ತಟ್ಟೆ, ಚೊಂಬು, ಬೆಳ್ಳಿಯ ದೀಪಾಲೆಯ ಕಂಬ, 2 ಜೊತೆ ಬೆಳ್ಳಿ ಕಾಲು ಚೈನ್ ಕಳವು ಮಾಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಿಂಬಾಗಿಲಿನಿಂದ ಬಂದು ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಮನೆಯ ಹಿಂಬಾಗಿಲು ಹಾಗೂ ಛಾವಣಿಯ ಹೆಂಚು ತೆಗೆದು ಒಳನುಗ್ಗಿರುವ ಕಳ್ಳರು 1.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ನಡೆದಿದೆ.

ಮನೆ ಮಾಲೀಕರಾದ ಚಂದ್ರಮ್ಮ ಅವರು ಜು. 5ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತ

ಅಡಿಬೈಲು ರಂಗನಾಥಸ್ವಾಮಿ ದೇವಾಲಯಕ್ಕೆ ತೆರಳಿದ್ದರು. ಪೂಜೆ ಮುಗಿಸಿಕೊಂಡು ಸಂಜೆ ಬಂದಾಗ ಕಳ್ಳತನವಾಗಿರುವುದು ತಿಳಿದಿದೆ. ಬೀರುವಿನಲ್ಲಿಟ್ಟಿದ್ದ 6 ಗ್ರಾಂ ತೂಕದ ಚಿನ್ನದ ಸರ, 1 ಗ್ರಾಂನ 2 ಉಂಗುರ, 3 ಗ್ರಾಂನ ಒಂದು ಉಂಗುರ, 3 ಗ್ರಾಂ ತೂಕದ 2 ಜೊತೆ ಓಲೆ ಹಾಗೂ ಮಗುವಿನ ಬೆಳ್ಳಿ ಉಡದಾರ ಹಾಗು ಬೆಳ್ಳಿ ಬ್ರಾಸ್ ಲೈಟ್ ಮತ್ತು 3 ಸಾವಿರ ರೂ. ನಗದು ಅಪಹರಿಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಜುಲೈ-09

1816: ಅರ್ಜೆಂಟಿನಾ ದೇಶವು ಸ್ಪೇನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

1944: ದ್ವಿತೀಯ ಮಹಾಯುದ್ಧದ ವೇಳೆ ಸೈಪಾನ್ ಯುದ್ಧ ಅಂತ್ಯಗೊಂಡು ಜಪಾನ್‌ಗೆ ಭಾರೀ ಹಿನ್ನಡೆಯಾಯಿತು.

2002: ಆಫ್ರಿಕನ್ ಒಕ್ಕೂಟ ಅಧಿಕೃತವಾಗಿ ಕಾರ್ಯಾರಂಭ ಮಾಡಿತು.

**ಜನನ**

1969: ಬಾಲಿವುಡ್‌ನ ಖ್ಯಾತ ನಟ ಸಂಜಯ್ ದತ್

1856: ಭಾರತೀಯ ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರನಾಯಕ ಬಾಲ ಗಂಗಾಧರ ತಿಲಕ್

1925: ಧ್ಯಾನ ಚಳವಳಿಯ ಪ್ರವರ್ತಕ ಮಹರ್ಷಿ ಮಹೇಶ್ ಯೋಗಿ

# ಹೆದ್ದಾರಿಯೆಂಬ ಹೆಬ್ಬಾವು-7

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ**

ಅವನ ಹೆಸರು ದೇವಪ್ಪ ಅಂತೆ. ಆ ಈಚಲ ಮರದಲ್ಲಿ ಸಾಕಷ್ಟು ಮೊಲಗಳಿದ್ದು, ಗೂಟಗಳನ್ನು ನೆಲಕ್ಕೆ ಹೊಡೆದು, ತೆಳುವಾದ ತಂತಿಯಿಂದ ಮಾಡಿದ ಬಲೆಗಳನ್ನು ಅಲ್ಲಲ್ಲಿ ಕಟ್ಟಿ; ದಿನಕ್ಕೆ ಒಂದೆರಡಾದರೂ ಮೊಲ ಹಿಡಿಯುವುದು ಅವನ ಹವ್ಯಾಸ. ಮಲೆನಾಡಿರಲಿ ಅಥವಾ ಬಯಲು ಸೀಮೆಯಿರಲಿ ಈ ರೀತಿಯ ಬಲೆ, ಇಡಚಲು, ಹಕ್ಕಿಬಲೆ, ಉಳ್ಳ ಮುಂತಾದವನ್ನು ಉಪಯೋಗಿಸಿ ಕೋವಿಯಿಲ್ಲದೇ ಶಿಕಾರಿ ಮಾಡುವುದು ವಾಡಿಕೆ. ಬೈಕ್, ಟಿಲ್ಲರ್, ಮುಂತಾದವುಗಳ ಕ್ಲಚ್ ಕೇಬಲ್ಲನ್ನು ಆಯಾ ಪ್ರಾಣಿಗಳ ತಾಕತ್ತಿಗೆ ಅನುಗುಣವಾಗಿ ಪ್ರಾಣಿಗಳು ತಿರುಗುವ ಗಂಡಿಗೆ ಕಟ್ಟಿ, ಹಿಡಿದು ಹಬ್ಬ ಹುಡಿಹಾರಿಸುವುದು ಇಲ್ಲಿನ ಅಭ್ಯಾಸ. ಈ ಹಕ್ಕಿಪಿಕ್ಕರು, ಗೋಸಾಯಿಗಳು ಕಾಡುಕೋಳಿ, ಹುಂಡಗೋಳಿ, ಸುಟ್ಟಗೋಳಿ, ಬುರ್ಲಕ್ಕಿಗಳನ್ನು ಕೆಲವೊಮ್ಮೆ ನವಿಲುಗಳನ್ನು ರಾಶಿರಾಶಿ ಹಿಡಿದು ತಿನ್ನುವುದರ ಜೊತೆಗೆ ಮಾರುವುದೂ ಮಾಡುತ್ತಾರೆ. ನಮ್ಮೂರಿನಲ್ಲಿ ಆಗ ಕೇಪಿನ ಕೋವಿಯಲ್ಲಿ ಕಾಡುಕೋಳಿ ಹೊಡೆಯುವ ಕೆಲ ಶಿಕಾರಿಗಳು ಈ ಹಕ್ಕಿಪಿಕ್ಕರ ಆರ್ಭಟವನ್ನು ತಡೆಯಲಾರದೆ ಹೊಟ್ಟೆಯುರಿಯಿಂದ ಫಾರೆಸ್ಟ್‌ನೋರಿಗೆ ಹಚ್ಚಿಕೊಟ್ಟು ಪಾಪದ ಅಲೆಮಾರಿಗಳನ್ನು ಹೆಂಗಸರು ಮಕ್ಕಳೆನ್ನದೇ ಬೆಂಡೆತ್ತಿಸಿ, ಅಡ್ರಸ್ಸಿಲ್ಲದಂತೆ ಮಾಡಿದರು. ಈ ಲೋಕಲ್ ಕೇಪಿನಕೋವಿ ಶಿಕಾರಿದಾರರು ನೇರಳೆಮರದ ಎಲೆಯನ್ನು ಉಪಯೋಗಿಸಿ ಪೀಪಿ ಮಾಡಿಕೊಂಡು ಅದನ್ನು ಕಾಡುಕೋಳಿಯ ಕೂಗನ್ನೇ ಅನುಕರಿಸುವಂತೆ ಊದಿ ಕೋಳಿಗಳನ್ನು ಆಕರ್ಷಿಸಿ, ಅವು ಮರುಳಾಗಿ ಬಂದ ಕೂಡಲೇ ಪಠೀರೆನಿಸುತ್ತಿದ್ದರು.

ಕೇಪಿನ ಕೋವಿ ಲೋಡ್ ಮಾಡುವ ವಿಧಾನವೇ ವಿಶಿಷ್ಟವಾದುದು. ಕೋವಿಯ ಜೊತೆಗಿರುವ ಹೊಳವಿನಷ್ಟೇ ಉದ್ದವಾದ ಗಜದಲ್ಲಿ, ಹೊಳವು ಅಂದರೆ ಕೊಳವೆ, ಆ ಕೊಳವೆಯೊಳಗೆ ತೆಂಗಿನ ಜುಂಗನ್ನು ಉಂಡೆಮಾಡಿ ನೂಕಿ ಹಿಂದೆ ಮುಂದೆ ಆಡಿಸಿ ಸ್ವಚ್ಛಗೊಳಿಸುತ್ತಾರೆ. ಆನಂತರ ಆ ಜುಂಗನ್ನು ಗಜದ ಹಿಂಭಾಗದ ಸ್ಕೂನಂತ ತುದಿಯಿಂದ ಸಿಕ್ಕಿಸಿಕೊಂಡು ಹೊರತೆಗೆಯುತ್ತಾರೆ. ಆ ನಂತರ ನಿಗದಿತ ಅಳತೆಯಲ್ಲಿ ರಂಜ್ಕ (ಗಂಧಕ)ವನ್ನು ಕೊಳವೆಯೊಳಗೆ ಸುರುವಿ ತೆಂಗಿನ ಜುಂಗಿನ ಉಂಡೆಯನ್ನು ತೂರಿಸಿ ಗಜದಿಂದ ಘಟ್ಟಿಸಬೇಕು. ನಂತರ ಸ್ವಲ್ಪ ರವೆ ಎಂಬ ಸೀಮೇಅಕ್ಕಿ ಗಾತ್ರದ ಚಿಕ್ಕಚಿಕ್ಕ ಸೀಸದ ಗುಂಡುಗಳನ್ನು ಹಾಕಿ ಮತ್ತೊಮ್ಮೆ ತೆಂಗಿನಜುಂಗಿನ ಉಂಡೆಯನ್ನು ತೂರಿಸಿ ಮತ್ತೊಮ್ಮೆ ಘಟ್ಟಿಸಬೇಕು. ಹೊಡೆದು ಉರುಳಿಸಲಿಕ್ಕಿರುವ ಪ್ರಾಣಿಯೇನಾದರೂ ದೊಡ್ಡದಾಗಿದ್ದಲ್ಲಿ ಗೋಲಿಗಾತ್ರದ ಸೀಸದ ದೊಡ್ಡ ಗುಂಡುಗಳಾದ ಬಕ್ಸೆಟನ್ನು ಅವಶ್ಯಕತೆಗೆ ತಕ್ಕಷ್ಟು ಸೇರಿಸಿ ಜುಂಗಿನ ಉಂಡೆಯನ್ನು ಘಟ್ಟಿಸಿ ಲೋಡ್ ಮಾಡಿಕೊಳ್ಳುತ್ತಾರೆ. ನಂತರ ಕುದುರೆಯ ಜಾಗವಾದ ಇಗ್ನಿಷನ್ ಪಾಯಿಂಟ್‌ನಲ್ಲಿ ತಾಮ್ರದ ಕೇಪನ್ನು ಟೊಪ್ಪಿಯ ರೀತಿ ಸಿಕ್ಕಿಸುತ್ತಾರೆ. ಗುರಿಯನ್ನು ಸಿದ್ದಪಡಿಸಿಕೊಂಡು ಕುದುರೆಯೆಳೆದು ಟ್ರಿಗರ್ ಒತ್ತಿದಲ್ಲಿ ಭಾರೀ ಸದ್ದಿನೊಂದಿಗೆ ಸಿಡಿಯುವ ಕೇಪಿನಕೋವಿ ಈಗ ಅಪರೂಪವಾಗುತ್ತಿದೆ. ರೆಡಿಮೇಡ್ ಶೂಟಿಗೆ ಅನುಕೂಲವಾಗುವಂತೆ ತೋಟಾಕೋವಿಯಿರುವುದು ಹಾಗೂ ಅದರ ಪೆಟ್ಟು ಜೋರಾಗಿರುವುದರಿಂದ ಶಿಕಾರಿಯವರು ಹೆಚ್ಚಾಗಿ ಈ ಆಧುನಿಕ ಆಯುಧ ತೋಟಾಕೋವಿಯನ್ನೇ ಖಾಯಸ್ ಪಡುತ್ತಾರೆ.

ಇನ್ನು ಇಡಚಲಿನ ವಿಚಾರ ಅತ್ಯಂತ ಸರಳವಾದದ್ದು. ಮರದ ಅನೇಕ ಪಟ್ಟಿಗಳನ್ನು ಸೇರಿಸಿ ನಾಲ್ಕಡಿ ಚೌಕದ ವಿಸ್ತಾರದಲ್ಲಿ ತಡಿಕೆಯೊಂದನ್ನು ನಿರ್ಮಿಸಿ, ಅವಶ್ಯವಿದ್ದರೆ ಭಾರಕ್ಕೆಂದು ಕಲ್ಲನ್ನು ಹೇರುತ್ತಾರೆ. ಒಂದು ತುದಿಯನ್ನು ಎತ್ತಿ ಒಂದು ತೆಳುವಾದ ಹಾಗೂ ಸೂಕ್ಷ್ಮವಾದ ಪಟ್ಟಿಯನ್ನು ಆಧಾರಕೊಟ್ಟು ನಿಲ್ಲಿಸಲಾಗುತ್ತದೆ. ಅದರ ಅಡಿ ಯಾವ ಪ್ರಾಣಿ ಅಥವಾ ಪಕ್ಷಿ ಹಿಡಿಯಬೇಕೋ ಆ ಮಿಕದ ಇಷ್ಟದ ಆಹಾರವನ್ನು ಚೆಲ್ಲಿ ಆಕರ್ಷಿಸಬೇಕು. ಆಹಾರವನ್ನು ಆಯಲು ಬರುವ ಪ್ರಾಣಿ-ಪಕ್ಷಿಯನ್ನು ತಾಗಿದ ಕೂಡಲೇ ಮರದ ಪಟ್ಟಿಗಳ ಟೆರೇಸ್ ಥಟಾರನೆ ಕುಸಿದುಬಿದ್ದು ಶಿಕಾರಿ ಯಶಸ್ವಿಯಾಗುತ್ತದೆ.

ಇನ್ನು ಇದಕ್ಕೆ ಸಂಬಂಧಿಸಿದ ಶಿಕಾರಿ ಘಟನೆಯನ್ನು ಇಲ್ಲಿ ಹೇಳಲೇಬೇಕಾಗಿದೆ. ನಮ್ಮ ಏಲಕ್ಕಿ ತೋಟದಲ್ಲಿ ಏಲಕ್ಕಿ ಹಣ್ಣಾಗುವ ಕಾಲದಲ್ಲಿ ಇಲಿಗಳು, ಅಳಿಲುಗಳು ವಿಪರೀತ ಕಾಟಕೊಟ್ಟು ಹಣ್ಣುಗಳನ್ನು ಒಡೆದು ತಿನ್ನುತ್ತಿದ್ದವು. ಒಂದೊಂದು ಗಿಡದಲ್ಲಿಯೂ ಹತ್ತರಿಂದ ಐವತ್ತು ಕಾಯಿಗಳು ಪ್ರತಿ ಸುತ್ತಿನ ಕೊಯ್ಲಿನಲ್ಲಿಯೂ ಇಲಿ-ಅಳಿಲುಗಳಿಗೆ ಆಹಾರವಾಗುತ್ತಿದ್ದವು, ಹೇಗಾದರೂ ಇದನ್ನು ತಡೆಯಬೇಕೆಂದು ನಿರ್ಧರಿಸಿ ತೋಟ ಕಾಯುವ ಜಬ್ಬನಿಗೆ ಇಲಿ ಹಿಡಿಯುವ ಕತ್ತರಿಗಳನ್ನು ತಂದುಕೊಟ್ಟೆವು. ಇಲಿ, ಅಳಿಲುಗಳನ್ನು ಆಕರ್ಷಿಸಲು ಒಣಮೀನಿನ ತುಂಡುಗಳನ್ನು ಸಹಾ ಒದಗಿಸಿದೆವು. ಒಂದು ದಿನ ಹೀಗೇ ಎಂದಿನಂತೆ ನಾನೂ ನನ್ನ ತಮ್ಮನೂ ತೋಟಕ್ಕೆ ಹೋದೆವು. ನಾವು ಬಂದ ಸದ್ದಿಗೆ ಜಬ್ಬ ಎಲ್ಲೋ ಕುಳಿತಿದ್ದವ ಯಾರೋಯ್‌ಟಿ ಎಂದು ಕತ್ತಿ, ದೊಣ್ಣೆಯೊಂದಿಗೆ ಜಿಗಿದುಬಂದ. ಓ ಅಣ್ಣಯ್ಯರೇ ನೀವಾ?ಟಿ ಎಂದು ಈ ಅಳಿಲುಗಳು ಏನು ದಾಂಧಲೆ ಮಾಡ್ತಿದಾವೆ ನೋಡಿ, ಕೇಳಿ, ಕೇಳಿ; ಚಿಪ್ಚಿಪ್‌ಟಿ ಅಂತಾ ಕೂಗ್ತಿದಾವಲ್ಲ. ಏನಿಲ್ಲ ಅಂದ್ರೂ ದಿನಕ್ಕೆ ಎರಡರಿಂದ ಮೂರು ಸೇರು ಹಣ್ಣು ತಿಂದು ಹಾಳುಮಾಡ್ತವೆ. ಕತ್ತರೀನಾ ನಾಲ್ಕು ಕಡೆ ಇಟ್ಟಿದ್ದೀನಿ. ಈ ಕಡೆಯವೆರಡನ್ನು ನೋಡ್ಕಂಡ್ ಬಂದೆ. ಒಂದು ಸಿಡಿದಿದೆ, ಆದ್ರೆ ಏನೂ ಬಿದ್ದಿಲ್ಲ. ಇನ್ನೊಂದು ಸಿಡಿದಿಲ್ಲ, ಆದರೆ ಮೀನಿನ್ ತುಂಡಿಲ್ಲ. ಆ ಕಡೆ ಹಳ್ಳದಾಚೆದನ್ನು ಇನ್ನೂ ನೋಡಿಲ್ಲ. ನೀವು ಬಂದಿದ್ದು ಸರಿಯಾಯ್ತು. ನಡೀರಿ ನೋಡ್ಕಂಡ್ ಬರೋಣಟಿಟಿ ಎಂದು ನಮ್ಮನ್ನೂ ಕರೆದ. ಏನ್ ಜಿಗಣೆ ಅಂತೀರಿ, ಒಂದು ಹೆಜ್ಜೆಯಿಟ್ಟರೆ ಕಡೇಪಕ್ಷ ಐದಾರು ಜಿಗಣೆಗಳು ಸೊಂಡಿಲೆತ್ತುತ್ತಿದ್ದವು. ಕೈಯಲ್ಲಿ ಮುಟ್ಟಲು ಹೇಸಿಗೆಯಾಗಿ ಕತ್ತಿಯ ತುದಿಯಲ್ಲೇ ಹೆರೆದು, ಜಿಗಣೆಯನ್ನು ಕತ್ತಿಗೆ ಹತ್ತಿಸಿಕೊಂಡು ಪಕ್ಕದ ಮರಕ್ಕೆ ಒರೆಸಿ ಕತ್ತಿಯಿಂದಲೇ ಚಚ್ಚಿಯೋ ಕೊಯ್ದೋ ಕಥೆ ಮುಗಿಸುತ್ತಿದ್ದೆವು. ನಾವು



ನಡೆದಾಡುವಾಗ ನೆಲದಲ್ಲಿ ಆಗುವ ಕಂಪನದಿಂದಲೇ ಜಾಗೃತವಾಗುವ ಈ ಪರತಂತ್ರಿಗಳು ನಮಗೆ ಅರಿವಾಗದಂತೆ ನಿಧಾನವಾಗಿ ನಮ್ಮ ಕಾಲನ್ನೇರಿ ಅನುಕೂಲಕರ ಜಾಗ ಸೇರಿಕೊಂಡು ಸೂಕ್ಷ್ಮವಾಗಿ ಚರ್ಮ ಕೊರೆದು ರಕ್ತ ಹೀರಲು ಪ್ರಾರಂಭಿಸುತ್ತವೆ. ಈ ಸಮಯದಲ್ಲಿ ರಕ್ತ ಹೆಪ್ಪುಗಟ್ಟದಿರುವಂತೆ ನಮ್ಮ ರಕ್ತನಾಳದೊಳಗೆ ಹಿರುಡಿನ್ ಎಂಬ ರಾಸಾಯನಿಕವನ್ನು ಇಂಜೆಕ್ಟ್ ಮಾಡುತ್ತವೆ. ರಕ್ತ ಹೀರಿ ಇನ್ನು ತನ್ನ ದೇಹದಲ್ಲಿ ರಕ್ತ ತುಂಬಿಸಿಕೊಳ್ಳಲು ಜಾಗವೇ ಇಲ್ಲವೆಂದಾಗ ಕಚ್ಚಿಕೊಂಡಿದ್ದ ಭಾಗವನ್ನು ಬಿಟ್ಟು ಉಂಡುಂಡಾದ ಜಿಗಣೆ ಉರುಳಿಹೋಗುತ್ತದೆ. ಆದರೆ ನಮ್ಮ ದೇಹದ ಮೇಲೆ ಕಚ್ಚಿಕೊಂಡಿದ್ದ ಭಾಗದಲ್ಲಿ ಇಂಜೆಕ್ಟ್ ಮಾಡಿದ್ದ ಹಿರುಡಿನ್ ಪ್ರಭಾವದಿಂದ ರಕ್ತ ನಿರಂತರವಾಗಿ ಕಡಿಮೆಯೆಂದರೂ ಇಪ್ಪತ್ತು ನಿಮಿಷ ಸ್ರಾವವಾಗುತ್ತಲೇ ಇರುತ್ತದೆ. ಕಾಲ್ಬೆರಳುಗಳ ಸಂದಿ, ಮುಂಗಾಲು, ಅವಕಾಶವಾದರೆ ತೊಡೆಯ ಸಂದಿಯಲ್ಲೂ ರಕ್ತಹೀರುವ ಕೆಲಸ ಶುರು ಮಾಡುವ ಈ ಜಿಗಣೆಗಳನ್ನು ವೈದ್ಯಶಾಸ್ತ್ರದಲ್ಲಿ ದೇಹದೊಳಗೆ ಸೇರಿರಬಹುದಾದ ವಿಷವನ್ನು ತೆಗೆಯಲೂ ಬಳಸುತ್ತಾರೆ.

ಜಬ್ಬ, ಅಳಿಲು ಹಿಡಿಯಲು ಇರಿಸಿದ್ದ ಕತ್ತರಿ ತೋರಿಸಲು ನಮ್ಮನ್ನು ಕರೆದುಕೊಂಡು ಹೋದವನು ಗಕ್ಕನೆ ನಿಂತ. ಕತ್ತರಿಯನ್ನು ಚಿಕ್ಕ ಬೈನೇಗಿಡವೊಂದರ ಬುಡಕ್ಕೆ ತಂತಿಯಿಂದ ನಾಯಿಯನ್ನು ಸರಪಳಿಯಲ್ಲಿ ಕಟ್ಟುವಂತೆ ಕಟ್ಟಲಾಗಿತ್ತು. ಕತ್ತರಿ ಸಿಡಿದಿತ್ತು. ಆದರೆ ಯಾವುದೇ ಇಲಿಯಾಗಲೀ ಅಳಿಲಾಗಲೀ ಸಿಕ್ಕಿಬಿದ್ದಿರಲಿಲ್ಲ. ಬದಲಿಗೆ ಬೃಹತ್ತಾದ ಆಮೆಯೊಂದು ಕತ್ತನ್ನು ಆಲ್ ಮೋಸ್ಟ್ ಕತ್ತರಿಸಿಕೊಂಡು ಸತ್ತು ಅಂಗಾತ ಬಿದ್ದಿತ್ತು. ರಕ್ತಕ್ಕೆ ಇರುವೆಗಳು ಮುತ್ತುತ್ತಿದ್ದವು. ದೊಡ್ಡ ಗಾತ್ರದ ಹೊನ್ನೊಣಗಳು ಆಮೆಯ ದೇಹದ ಮೇಲೆ ಅಲ್ಲಲ್ಲಿ ಬಿಳಿಪುಡಿಯಂಥಾ ಮೊಟ್ಟೆಗಳನ್ನು ಇಡುತ್ತಿದ್ದವು.

ಹಿಗ್ಗಿ ಹೀರೇಕಾಯಿಯಾದ ಜಬ್ಬ ಸರಿಸುಮಾರು ಒಂದೂವರೆ ಕೇಜಿ ಮಾಂಸ ಸಿಗಬಹುದಾದ ಆಮೆಯನ್ನು ಕತ್ತರಿಯಿಂದ ಬಿಡಿಸಿಕೊಂಡು ಬನ್ನಿ ಬನ್ನಿ ಮುರಲಾಮಿ ರಿಪೇರಿ ಮಾಡದನ್ನು ತೋರಿಸ್ತೀನಿಟಿಟಿ ಎಂದ್ಹೇಳಿ ಬೇಸಿಗೆಯಲ್ಲಿ ನೀರಿಗಾಗಿ ಹಳ್ಳಕ್ಕೆ ಅಡ್ಡಕಟ್ಟಿದ ಒಡ್ಡಿನತ್ತ ನಮ್ಮನ್ನು ಕರೆದೊಯ್ದು ಕೈಕಾಲು ತೊಳೆಯಲು ಅಲ್ಲಿ ಇಟ್ಟಿದ್ದ ಅಗಲವಾದ ಕಾಡುಕಲ್ಲಿನ ಮೇಲೆ ಆಮೆಯನ್ನು ಅಡಿಗಟ್ಟು ಮೇಲಕ್ಕೆ ಬರುವಂತೆ ಇಟ್ಟುಕೊಂಡು ಕತ್ತಿಯಲ್ಲಿ ಅದರ ಬಲವಾದ ಚಿಪ್ಪನ್ನು ಕುಟುಕಿ ಕುಟುಕಿ ಒಡೆದು ತೆಗೆದ. ಚಿಪ್ಪಿನ ಒಳಮೈಗೆ ಗಟ್ಟಿಯಾಗಿ ಅಂಟಿಕೊಂಡಿದ್ದ ಆಮೆಯ ಮಾಂಸದ ಮುದ್ದೆಯನ್ನು ಮೀಟಿ ಎಳೆದು, ಕಿತ್ತು, ಕಾಲುಗಳಲ್ಲಿ ಚಿಪ್ಪನ್ನು ಒತ್ತಿ ಹಿಡಿದು ಆಮೆಯ ಕಾಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಹಲ್ಲುಕಚ್ಚಿ ಕಿತ್ತು ತೆಗೆದನು.

ನನ್ನ ತಮ್ಮ ಪಾಪಣ್ಣ ಈ ಆಮೆ ಹೆಂಗ್ ಮರಿಯಾಗುತ್ತೆ? ಮೊಟ್ಟೆಯಿಂದನೇ ತಾನೆ?ಟಿಟಿ ಎಂದ. ಹೂ ಕಣಾ, ಹೆಣ್ಣಾಮೆ ಮರಳನ್ನ ಕೊರೆದು ಆದ ಗುಂಡಿಯೊಳಗೆ ಹತ್ತರಿಂದ ಹದಿನೈದು ಸಂಖ್ಯೆಯ, ಒಂದೂವರೆಯಿಂದ ಎರಡಿಂಚು ಉದ್ದುದ್ದನೆಯ, ತಿಳಿಗುಲಾಬಿ ಬಣ್ಣದ, ತೆಳು ಸಿಪ್ಪೆಯ ಮೊಟ್ಟೆಗಳನ್ನ ಇಟ್ಟು ಮರಳನ್ನ ಮುಚ್ಚುತ್ತದೆ. ಮೂರ‍್ರಿಂದ ನಾಲ್ಕ್ ತಿಂಗಳಲ್ಲಿ ಸಣ್ಸಣ್ಣ ಮರಿಗಳು ಮರಳೊಳಗಿಂದ ಹೊರಕ್ಕೆ ಬರ್ತವೆಟಿಟಿ ಎಂದೆ. ಅದುಕ್ಕೆ ಚಿಪ್ ಹೆಂಗೆ ಹುಟ್ಟುತ್ತೆ? ಬೇರೆ ಪ್ರಾಣಿಗಳಿಗೆ ಇಲ್ದ ಚಿಪ್ಪು, ಇವುಕ್ಕೆ ಮಾತ್ರ ಹೇಗೆ?ಟಿಟಿ ಎಂದು ಮರು ಪ್ರಶ್ನೆ ಹಾಕಿದ. ಊಹೂ, ನನಗೂ ಗೊತ್ತಿರ್ಲಿಲ್ಲ. ಜಬ್ಬನ ಕಡೆಗೆ ನೋಡಿದೆ, ಅವನೂ ಗೊತ್ತಿಲ್ಲವೆಂಬಂತೆ ಪ್ಯಾಲಿ ನಗೆ ನಕ್ಕ. ಯಾಕಿರಬಹುದೆಂದು ಬಹಳ ತಲೆ ಕೆಡಿಸಿಕೊಂಡೆ.

ಕಡೆಗೆ ಅದು ನಿಧಾನಕ್ಕೆ ನೆಡೀತೀತಲ್ಲ, ಬೇರೆ ಪ್ರಾಣಿಗಳು ಹಿಡಿದು ತಿನ್ನಬಾರದಂತ ದೇವ್ರೇ ಚಿಪ್ಪು ಸಮೇತ ಸೃಷ್ಟಿ ಮಾಡಿದೆ ಅಂತ ಕಾಣುತ್ತೆಟಿಟಿ ಅಂದೆ. ಹಲವು ದಿನಗಳ ನಂತರ ಯಾವುದೋ ಸೈನ್ಸ್ ಜರ್ನಲ್ ಓದುತಿದ್ದಾಗ ಈ ಆಮೆಯ ಚಿಪ್ಪಿನ ವಿಷಯ ತಿಳಿಯಿತು. ಘನೀಕರಿಸುವ ಹಂತದಲ್ಲಿ ಎಲ್ಲಾ ಕಶೇರುಕಗಳ ಭ್ರೂಣಗಳು ನೋಡಲು ಒಂದೇ ರೀತಿಯಲ್ಲಿರುತ್ತವೆ. ತನ್ನ ಹದಿನಾರು ದಿನಗಳ ಬೆಳವಣಿಗೆಯ ನಂತರ ಆಮೆಯ ಭ್ರೂಣ ಕೆಲ ಅಪೂರ್ವ ಮಾರ್ಪಾಡು ಹೊಂದಲಾರಂಭಿಸುತ್ತದೆ. ಬೆನ್ನ ಮೇಲಿನ ಹಾಗೂ ಹೊಟ್ಟೆ ಕೆಳಗಿನ ಚಿಪ್ಪು ಬೆಳೆಯಲು ಅನುವಾಗುವಂತೆ ಅದರ ಭುಜದ ಮೂಳೆಗಳು ಎದೆಗೂಡಿನ ಮೂಳೆಗಳ ಒಳಭಾಗಕ್ಕೆ ಜಾರಲಾರಂಭಿಸುತ್ತವೆ. ನಂತರ ಅವೇ ಎದೆಗೂಡಿನ ಮೂಳೆಗಳು ಹೊರಮುಖವಾಗಿ ಬೆಳೆಯಲಾರಂಬಿಸಿ, ಒಂದಕ್ಕೊಂದು ಸಂಯೋಜನೆಗೊಂಡು ಬೆನ್ನ ಮೇಲೆ ನಮಗೆ ಕಾಣುವ ಅಗಲವಾದ ಚಿಪ್ಪಾಗಿ ರೂಪುಗೊಳ್ಳುತ್ತದೆ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248